**ದಿನಾಂಕ: 31-01-2019 ರಂದು ಬೆಳಗ್ಗೆ:11.00 ಗಂಟೆಗೆ ಅಧ್ಯಕ್ಷರು, ಲೆಕ್ಕಪತ್ರ ಸ್ಥಾಯಿ ಸಮಿತಿ ರವರ ಅಧ್ಯಕ್ಷತೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಸಂಬಂಧಿಸಿದ ಉಪ ನಿಯಂತ್ರಕರು(ಹಣಕಾಸು), ಸಹಾಯಕ ನಿಯಂತ್ರಕರು(ಹಣಕಾಸು) ಹಾಗೂ ಲೆಕ್ಕ ಅಧೀಕ್ಷಕರು ರವರೊಂದಿಗೆ ಪರಿಚಯ ಸಭೆ ನಡೆಸಿದ ನಡವಳಿಕೆಗಳು.**

**ಸಭೆಗೆ ಹಾಜರಿದ್ದ ಲೆಕ್ಕಪತ್ರ ಸ್ಥಾಯಿ ಸಮಿತಿ ಕಛೇರಿಯ ಅಧ್ಯಕ್ಷರು ಹಾಗೂ ಸದಸ್ಯರುಗಳು:**

| ಕ್ರಮ ಸಂಖ್ಯೆ | ವಾರ್ಡ್ ಸಂಖ್ಯೆ | ಹೆಸರುಗಳು | ಪದನಾಮ |
|---|---|---|---|
| 1 | 42 | ಶ್ರೀ. ಎಂ.ವೇಲುನಾಯಕರ್ | ಅಧ್ಯಕ್ಷರು |
| 2 | 1 | ಶ್ರೀಮತಿ. ಚಂದ್ರಮ್ಮ ಕೆಂಪೇಗೌಡ | ಸದಸ್ಯರು |
| 3 | 85 | ಶ್ರೀಮತಿ. ಶ್ವೇತ ವಿಜಯ್ ಕುಮಾರ್ | ಸದಸ್ಯರು |
| 4 | 187 | ಶ್ರೀಮತಿ. ಆರ್.ಪ್ರಭಾವತಿ ರಮೇಶ್ (ಜೆಲ್ಲಿ) | ಸದಸ್ಯರು |
| 5 | 50 | ಶ್ರೀಮತಿ. ಮೀನಾಕ್ಷಿ | ಸದಸ್ಯರು |
| 6 | 63 | ಶ್ರೀ. ಎಂ.ಕೆ.ಗುಣಶೇಖರ್ | ಸದಸ್ಯರು |
| 7 | 30 | ಶ್ರೀ. ನೌಶೀರ್ ಅಹ್ಮದ್ | ಸದಸ್ಯರು |
| 8 | 78 | ಶ್ರೀ. ಅಬ್ದುಲ್ ರಕೀಬ್ ಝಾಕೀರ್ | ಸದಸ್ಯರು |

**ಹಾಜರಿದ್ದ ಅಧಿಕಾರಿ ಹಾಗೂ ಸಿಬ್ಬಂದಿಗಳು:**

| ಕ್ರಮ ಸಂಖ್ಯೆ | ಹೆಸರು ಶ್ರೀಯುತರುಗಳಾದ | ಪದನಾಮ |
|---|---|---|
| 1 | ವಿಷ್ಣು ಪ್ರಸಾದ.ಎಂ. | ಉಪ ನಿಯಂತ್ರಕರು ಹಣಕಾಸು(ಯಲಹಂಕ) |
| 2 | ದೇವಕಿ.ಎನ್.ಕೆ. | ಉಪ ನಿಯಂತ್ರಕರು ಹಣಕಾಸು(ಪೂರ್ವ) |
| 3 | ಗೋಪಾಲ ಕೃಷ್ಣ | ಉಪ ನಿಯಂತ್ರಕರು ಹಣಕಾಸು(ದಾಸರಹಳ್ಳಿ) |
| 4 | ಬಿ.ಗಾಯತ್ರಿ | ಉಪ ನಿಯಂತ್ರಕರು ಹಣಕಾಸು(ದಕ್ಷಿಣ) |
| 5 | ಶೈಲ.ಎ.ಎಂ. | ಉಪ ನಿಯಂತ್ರಕರು ಹಣಕಾಸು(ಬೊಮ್ಮನಹಳ್ಳಿ) |
| 6 | ವಾಣಿ.ಎನ್ | ಉಪ ನಿಯಂತ್ರಕರು ಹಣಕಾಸು(ಆರ್.ಆರ್.ನಗರ) |
| 7 | ಬಸವರಾಜು.ಎಂ. | ಲೆಕ್ಕ ಅಧೀಕ್ಷಕರು, ಉ.ನಿ.ಹ. (ಆರ್.ಆರ್.ನಗರ) |
| 8 | ನೇತ್ರಪ್ರಕಾಶ್ | ಲೆಕ್ಕ ಅಧೀಕ್ಷಕರು, ಉ.ನಿ.ಹ. (ಪಶ್ಚಿಮ) |
| 9 | ಮುನಿರಾಜು.ಸಿ. | ದ್ವಿ.ದ.ಸ. ಉ.ನಿ.ಹ. (ಮಹದೇವಪುರ) |

ಮೊದಲನೆಯದಾಗಿ ಅಧ್ಯಕ್ಷರು, ಲೆಕ್ಕಪತ್ರ ಸ್ಥಾಯಿ ಸಮಿತಿ ರವರು ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರನ್ನು ಸ್ವಾಗತಿಸುತ್ತಾ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಸಂಬಂಧಿಸಿದ ಎಲ್ಲ ವಲಯ **ಉಪ ನಿಯಂತ್ರಕರು(ಹಣಕಾಸು), ಸಹಾಯಕ ನಿಯಂತ್ರಕರು(ಹಣಕಾಸು) ಹಾಗೂ ಲೆಕ್ಕ ಅಧೀಕ್ಷಕರು ರವರೊಂದಿಗೆ** ಪರಿಚಯ ಸಭೆ ಹಾಗೂ ಇತರೆ ವಿಷಯಗಳ ಬಗ್ಗೆ ಚರ್ಚಿಸಲು ಈ ಸಭೆಯನ್ನು ಕರೆಯಲಾಗಿದೆ ಎಂದು ತಿಳಿಸಿದರು.

ಮಾನ್ಯ ಅಧ್ಯಕ್ಷರು ಮಾತನಾಡುತ್ತಾ ಮೊದಲಿಗೆ ಎಲ್ಲಾ ಅಧಿಕಾರಿಗಳ ಪರಿಚಯ ಮಾಡಿಕೊಳ್ಳಲು ಸಭೆಗೆ ತಿಳಿಸಲು ಸೂಚಿಸಿದ ಮೇರೆಗೆ ಎಲ್ಲಾ ಅಧಿಕಾರಿಗಳು ತಮ್ಮ ತಮ್ಮ ಹೆಸರು ಮತ್ತು ವಲಯಗಳ ಪರಿಚಯ ಮಾಡಿಕೊಂಡರು ಹಾಗೂ ಈ ಕೆಳಕಂಡ ಅಂಶಗಳನ್ನು ನೀಡಲು ಕೋರಿದರು.

**1. GAD CASH BOOK & WORK CASH BOOK**

ಇದಕ್ಕೆ ಉಪ ನಿಯಂತ್ರಕರು(ಹಣಕಾಸು)ರವರು WORK CASH BOOK ಬಗ್ಗೆ ಉಪ ನಿಯಂತ್ರಕರು(ಹಣಕಾಸು) ಕಛೇರಿ ವ್ಯಾಪ್ತಿಗೆ ಬರುವುದಿಲ್ಲ ಎಂದು ಉತ್ತರಿಸಿದಾಗ ಅಧ್ಯಕ್ಷರು ಇದರ ಮಾಹಿತಿಯನ್ನು ಒದಗಿಸಲು ತಿಳಿಸಿದರು.

**2. MONTHLY LOC RELEASED FOR GAD, HORTICULTURE BILLS, SILT & TRACTOR BILLS**

ಇದಕ್ಕೆ ಉಪ ನಿಯಂತ್ರಕರು(ಹಣಕಾಸು)ರವರು ಮಾತನಾಡುತ್ತಾ HORTICULTURE BILLS, SILT & TRACTOR BILLS ವಲಯದ ಸಹಾಯಕ ನಿಯಂತ್ರಕರು ವ್ಯಾಪ್ತಿಗೆ ಬರುವುದಿಲ್ಲ. ಹಾರ್ಟಿಕಲ್ಚರ್ ಬಿಲ್ಲುಗಳು ಹಾಗೂ GAD ಬಿಲ್ಲುಗಳು ಪ್ರತ್ಯೇಕವಾಗಿ ಬರುತ್ತದೆ ಎಂದು ಉತ್ತರಿಸಿದರು.

3. **BANK RECONCILLATION AND PASS SHEET** ಅಧ್ಯಕ್ಷರು ಇದರ ಮಾಹಿತಿಯನ್ನು ಒದಗಿಸಲು ತಿಳಿಸಲಾಯಿತು.

4. **AUDIT REPORTS AND REPLIES, RECOVERY DETAILS** ಅಧ್ಯಕ್ಷರು ಇದರ ಬಗ್ಗೆ ಹೊಸದಾಗಿ ಆಡಿಟ್ ಮಾಡಿಸಬೇಕಾಗುತ್ತದೆ

ಅಧ್ಯಕ್ಷರು, ಲೆಕ್ಕಪತ್ರ ಸ್ಥಾಯಿ ಸಮಿತಿ ರವರು ಮಾತನಾಡುತ್ತಾ ಈ ಕಛೇರಿಯ ಆಡಿಟ್ ವಿಷಯದ ಬಗ್ಗೆ ಸಂಬಂಧಪಟ್ಟ ಬಟವಾಡೆ ಅಧಿಕಾರಿಗಳು ಜವಾಬ್ದಾರಿ ವಹಿಸಬೇಕಾಗಿರುತ್ತದೆ ಎಂದು ಉತ್ತರಿಸಿ ಈ ಬಗ್ಗೆ ಮುಂದಿನ ಸಭೆಯಲ್ಲಿ ಮಾಹಿತಿಯನ್ನು ಒದಗಿಸಲು ತಿಳಿಸಿದರು ಹಾಗೂ ನಾವೇನು ಮಾಹಿತಿಗಳನ್ನು ಕೇಳಿದ್ದೇವೆ ಅದನ್ನು ಕೂಡಲೇ ಒದಗಿಸಿದ ನಂತರ ಮತ್ತೊಂದು ಸಭೆಯನ್ನು ನಡೆಸುತ್ತೇವೆ.

**5. SILT & TRACTOR WORKS DETAILS & PAYMENT, PENDING BILL DETAILS**

ಸಹಾಯಕ ನಿಯಂತ್ರಕರು ಹಣಕಾಸು ರವರು ಮಾತನಾಡುತ್ತಾ ಇಂಜಿನಿಯರ್ಸ್‌ರವರೇ ರೂ.30.00 ಲಕ್ಷಗಳವರೆಗೆ. SILT & TRACTOR WORKS DETAILS & PAYMENT ಮಾಡುತ್ತಾರೆ ಎಂದು ತಿಳಿಸಿದರು.

ಶ್ರೀ.ನೌಶೀರ್ ಅಹ್ಮದ್, ಸದಸ್ಯರು ಮಾತನಾಡುತ್ತಾ ಶಿಲ್ಟ್ & ಟ್ರಾಕ್ಟರ್ ಪಿ.ಓ.ಡಬ್ಲ್ಯೂ. ಪ್ರೊಫಾರ್ಮ ಪೇಮೆಂಟ್‌ನ್ನು ಟೆಂಡರ್ ಮುಖಾಂತರ ಕೊಡುತ್ತಿದ್ದಾರೆ ಅದರ ಮಾಹಿತಿಯನ್ನು ನೀಡುವುದು ಮೊದಲು ಎಮರ್ಜೆನ್ಸಿ ಡಿ.ಸಿ.ಬಿಲ್ ರೀತಿಯಲ್ಲಿ ಪೇಮೆಂಟ್ ಮಾಡುತ್ತಿದ್ದರು ಈಗ ಇಲ್ಲ ಎಂದು ತಿಳಿಸಿದರು.

ಶ್ರೀ.ಎಂ.ಕೆ.ಗುಣಶೇಖರ್ ಸದಸ್ಯರು ಮಾತನಾಡುತ್ತಾ ಏತಕ್ಕೆ ಮಾಡುತ್ತಿಲ್ಲ ಡೀಸಿಂಟ್ರಲೈಜ್ ಆದಮೇಲೆ ನಿಮ್ಮ ಹಂತದಲ್ಲಿ ಏತಕ್ಕೆ ಕೊಡಬಾರದು ಎಂದು ಪ್ರಶ್ನಿಸಿದರು.

ಉಪ ನಿಯಂತ್ರಕರು ಹಣಕಾಸುರವರು ಮಾತನಾಡುತ್ತಾ ಹೀಗೆಯೇ 2016-17 ನೇ ಸಾಲಿನಿಂದ ಮಾಡುತ್ತಿದ್ದಾರೆ. ಅದರಲ್ಲಿಯೇ ರೂ.30.00 ಲಕ್ಷ ಫಿಕ್ಸ್ ಮಾಡಿಕೊಡುತ್ತಾರೆ.

ಶ್ರೀ.ನೌಶೀರ್ ಅಹ್ಮದ್, ಸದಸ್ಯರು ಮಾತನಾಡುತ್ತಾ ಶೇ:10 ರಷ್ಟು ಹಳೆಯ ವಾರ್ಡ್‌ಗೆ ರೂ.20 ಲಕ್ಷಗಳು ಹೊಸ ವಾರ್ಡುಗಳಿಗೆ ರೂ.30.00 ಲಕ್ಷಗಳು ಟೋಟಲ್ ಪಿ.ಓ.ಡಬ್ಲ್ಯೂ ರೂ.2.00 ಕೋಟಿ ಇದ್ದವರಿಗೆ 20.00 ಲಕ್ಷಗಳು ರೂ.3.00 ಕೋಟಿ ಇದ್ದವರಿಗೆ ರೂ.30.00 ಲಕ್ಷಗಳು ಕೊಡುತ್ತಿದ್ದಾರೆ.

ಶ್ರೀ.ಎಂ.ಕೆ.ಗುಣಶೇಖರ್ ಸದಸ್ಯರು ಮಾತನಾಡುತ್ತಾ ಹಾಗಿದ್ದಲ್ಲಿ ಏತಕ್ಕೆ ವಾಪಸ್ ತೆಗೆದುಕೊಂಡರು ಈ ಬಗ್ಗೆ ಪತ್ರವನ್ನು ತಯಾರಿಸಿ ಪ್ರಯಾರಿಟಿ ಸೀನಿಯರ್ ಬೇಸಿಸ್‌ನಲ್ಲಿ ಎಂದರೆ ಬೇಗ ಬಿಲ್‌ಗಳು ಪಾಸ್ ಆಗುತ್ತದೆ. ಡೀ ಸೆಂಟ್ರಲೈಸ್ ಆಗಿ ನಿಮ್ಮ ಲೆವೆಲ್‌ಗೆ ವಾಪಸ್ ಬರುವುದಕ್ಕೆ ಪತ್ರವನ್ನು ಬರೆಯುವುದು ಎಂದು ತಿಳಿಸಿದರು.

ಈ ಬಗ್ಗೆ ಅಧ್ಯಕ್ಷರು ಮಾತನಾಡುತ್ತಾ, ಇದು ಎಮರ್ಜೆನ್ಸಿ ವರ್ಕ್ ಇದ್ದಾಗ ಟೆಂಡರ್ ಹಾಕಿಕೊಂಡು ಇದ್ದರೆ ತಡವಾಗುತ್ತದೆ ಎಂದು ತಿಳಿಸಿದರು.

**6. HORTICULTURE WORKS & PENDING BILLS, PAYMENT DETAILS**

ಸಹಾಯಕ ನಿಯಂತ್ರಕರು ಹಣಕಾಸು ರವರು ಹಾರ್ಟಿಕಲ್ಚರ್ ವರ್ಕ್ಸ್ ಎಮರ್ಜೆನ್ಸಿ ವರ್ಕ್ಸ್‌ಗೆ ಸೇರುತ್ತದೆ ಎಂದು ತಿಳಿಸಿದಾಗ, ಅಧ್ಯಕ್ಷರು ಪೇಮೆಂಟ್ ಬಿಲ್ಸ್ ಡೀಟೈಲ್ಸ್, ಲಾಗ್ ಬಿಲ್, ಸಾಲಿಡ್ ವೇಸ್ಟ್ ಮ್ಯಾನೇಜ್ಮೆಂಟ್ ಪೇಮೆಂಟ್ ಬಿಲ್ಸ್, ಸ್ಯಾಲರಿ ಡಿಡಕ್ಷನ್ಸ್ ಪೇಮೆಂಟ್, ಕನ್ಸರ್ನ್ ಪಾರ್ಟ್‌ಮೆಂಟ್ ಡೀಟೈಲ್ಸ್‌ಗಳನ್ನು ಕೂಡಲೆ ಒದಗಿಸಲು ತಿಳಿಸಿದರು.

7. **INCOME TAX & GST QUARTERLY FILLING DETAILS** ಮಾಡುತ್ತಿದ್ದೀರಾ? ಎಂದು ಅಧ್ಯಕ್ಷರು ಪ್ರಶ್ನಿಸಿದಾಗ

ಉಪ ನಿಯಂತ್ರಕರು ಹಣಕಾಸುರವರು ಇದುವರೆವಿಗೂ ಯಾರು ಮಾಡಲಿಲ್ಲ ಎಂದು ಉತ್ತರಿಸಿದರು.

8. **IF ANY FUND DIVERSTION AND ANY UN CASHED CHEQUES DETAILS.**

ಅಧ್ಯಕ್ಷರು, ಲೆಕ್ಕಪತ್ರ ಸ್ಥಾಯಿ ಸಮಿತಿ ರವರು ಮಾತನಾಡುತ್ತಾ ದಿನಾಂಕ:29-01-2019 ರಂದು ನಡೆದ ಸಭೆಯಲ್ಲಿ ಈ ವಿಷಯದ ಬಗ್ಗೆ ಚರ್ಚಿಸಲಾಯಿತು ಹಾಗೂ ಒಂಟಿ ಮನೆಗಳ ಬಗ್ಗೆ ಬಹಳಷ್ಟು ದೂರುಗಳು ಬರುತ್ತಿದೆ. ಏನಾದರೂ ಫಂಡ್ ಡೈವರ್ಷನ್ಸ್ ಆಗಿದ್ದರೆ ಏನೇನು ಕ್ರಮ ತೆಗೆದುಕೊಂಡಿದ್ದೀರಿ, ಅದರ ಮಾಹಿತಿಯನ್ನು ಒದಗಿಸಲು ಸೂಚಿಸಿದರು.

ಶ್ರೀ.ನೌಶೀರ್ ಅಹ್ಮದ್, ಸದಸ್ಯರು ಒಂಟಿ ಮನೆಗಳನ್ನು ವೆಲ್‌ಫೇರ್ ಸ್ಕೀಮ್‌ನಲ್ಲಿ ಕ್ಲಬ್ ಮಾಡಿದ್ದೀರಾ ಎಂದು ಪ್ರಶ್ನಿಸಿದರು.

ಅಧ್ಯಕ್ಷರು, ಲೆಕ್ಕಪತ್ರ ಸ್ಥಾಯಿ ಸಮಿತಿ ರವರು ಮಾತನಾಡುತ್ತಾ, ಸದರಿ ಒಂಟಿ ಮನೆಗಳು ವೆಲ್‌ಫೇರ್ ಸ್ಕೀಮ್‌ಗೆ ಸೇರಿದೆ, ಅಕೌಂಟ್ಸ್ ಮೈನ್‌ಟೇನ್ ಮಾಡಿರುವ ಬಗ್ಗೆ ಮಾಹಿತಿ ನೀಡಲು ತಿಳಿಸಿದರು. ಈ ಸಂಬಂಧ ಗುತ್ತಿಗೆದಾರರಿಗೆ ಯಾವುದೇ ಹಣವು ತಲುಪುತ್ತಿಲ್ಲ, ಯಾವುದೇ ಬಿಲ್ಲು ಪಾವತಿಸಿರುವುದಿಲ್ಲವೆಂದು ಗುತ್ತಿಗೆದಾರರು ತಿಳಿಸಿರುತ್ತಾರೆ. ಸದರಿ ಯೋಜನೆಯಲ್ಲಿ ಕೆಲವರಿಗೆ ಸೈಕಲ್ ನೀಡಲಾಗಿರುತ್ತದೆ ಮತ್ತು ಕೆಲವರಿಗೆ ಸೈಕಲ್ ನೀಡಿಲ್ಲವೆಂದು ಹೇಳುತ್ತಿದ್ದಾರೆ. ಈ ಬಗ್ಗೆ ಮಾಹಿತಿಯನ್ನು ನೀಡಲು ತಿಳಿಸಿದರು.

ಉಪ ನಿಯಂತ್ರಕರು (ಹಣಕಾಸು) ದಾಸರಹಳ್ಳಿ ವಲಯಕ್ಕೆ ಸಂಬಂಧಿಸಿದಂತೆ ಕೌನ್ಸಿಲ್ ಸಭೆಯಲ್ಲಿ ದಾಸರಹಳ್ಳಿ ವಲಯದ ಒಂಟಿ ಮನೆಗಳ ಬಗ್ಗೆ ಬಹಳಷ್ಟು ದೂರುಗಳು ಬಂದಿದೆ ಹಾಗೂ ಈ ವಲಯದಲ್ಲಿ ಒಂಟಿ ಮನೆಗಳಿಗೆ ಎಷ್ಟು ಪೇಮೆಂಟ್ ರಿಲೀಸ್ ಆಗಿದೆ ಎಂದು ಅಧ್ಯಕ್ಷರು ಪ್ರಶ್ನಿಸಿದಾಗ, ಉಪ ನಿಯಂತ್ರಕರು ಹಣಕಾಸು(ದಾಸರಹಳ್ಳಿ) ರವರು ಮೂರು ತಿಂಗಳಿನಿಂದ ಹಣ ಬಿಡುಗಡೆಯಾಗದೇ ಇದ್ದಕಾರಣ ದೂರುಗಳು ಬರುತ್ತಿದೆ. ಇತ್ತೀಚೆಗೆ ರೂ.4.00 ಕೋಟಿಗಳು ಹಣ ಬಿಡುಗಡೆಯಾಗಿರುವುದರಿಂದ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಅಧ್ಯಕ್ಷರು ಮಾತನಾಡುತ್ತಾ ಒಂಟಿ ಮನೆ 24.1% ವೆಲ್‌ಫೇರ್ ಯೋಜನೆ ಅಡಿಯಲ್ಲಿ ಫಂಡ್ ಇಲ್ಲವೆಂಬ ಪ್ರಶ್ನೆಯೇ ಇಲ್ಲ. ಎಸ್.ಸಿ./ಎಸ್.ಟಿ. ರಿಸರ್ವ್ ಫಂಡ್ ಇದನ್ನು ಯಾವುದೇ ಕಾರಣಕ್ಕೂ ಶೇ:100% ಸ್ಯಾಟಿಸ್‌ಫೈ ಮಾಡುವುದು. ನಮ್ಮಲ್ಲಿ ಪ್ಯೂರ್ಲಿ ಎಸ್.ಟಿ./ಎಸ್.ಟಿ. ರಿಸರ್ವ್ ಫಂಡ್ ಇಲ್ಲವೆಂದು ನಾನು ಪ್ರಶ್ನೆ ಮಾಡಿದಾಗ, ಕಮೀಷನರ್ ಫಂಡ್ ಇದೆ ಎಂದು ದಿನಾಂಕ:29-01-2019 ರಂದು ನಡೆದ ಕೌನ್ಸಿಲ್ ಸಭೆಯಲ್ಲಿ ತಿಳಿಸಿದರು. ಯಾವ ಯಾವ ವಲಯಗಳಿಗೆ ಬಂದಿಲ್ಲ ಕೂಡಲೇ ಮಾಹಿತಿ ಒದಗಿಸಲು ಕೋರಿದರು.

ಸದರಿ ಫಂಡ್‌ಗಳನ್ನು ಡೈವರ್ಟ್ ಯಾರು ಮಾಡುವುದು ಎಂದು ಅಧ್ಯಕ್ಷರು, ಲೆಕ್ಕಪತ್ರ ಸ್ಥಾಯಿ ಸಮಿತಿ ರವರು ಪ್ರಶ್ನಿಸಿದಾಗ,

ಉಪ ನಿಯಂತ್ರಕರು ಹಣಕಾಸು(ಆರ್.ಆರ್.ನಗರ)ರವರು ಮಾತನಾಡಿ ನಾವೇ ಫಂಡ್ ರಿಲೀಸ್ ಮಾಡಿಸುತ್ತೇವೆ. ಸಿ.ಎ.ಓ.ರವರ ಕಛೇರಿಯಿಂದ ಹಣ ಬಿಡುಗಡೆ ಮಾಡುತ್ತಾರೆ ಈ ಹಿಂದೆ ಇರಲಿಲ್ಲ 2016 ಯಿಂದ ನಮ್ಮ ಹಂತದಲ್ಲಿ ಇದೆ. ಈಗ ನಾವೇ ಡೈರೆಕ್ಟಾಗಿ ಫಲಾನುಭವಿಗಳಿಗೆ ಪೇಮೆಂಟ್ ಮಾಡುತ್ತಿದ್ದೇವೆ. ಸಿ.ಎ.ಓ.ರವರಿಗೆ ಫಂಡ್ ರಿಲೀಸ್‌ಗಾಗಿ ರೂ.6.00 ಕೋಟಿ ಕೇಳಿದರೆ ಅದರಲ್ಲಿ 3.00 ಕೋಟಿ ರೂ.ಗಳನ್ನು ಬಿಡುಗಡೆ ಮಾಡುತ್ತಾರೆ ಅದಕ್ಕಾಗಿ ಕಷ್ಟವಾಗುತ್ತದೆ ಎಂದು ಉತ್ತರಿಸಿದೆ.

ಅಧ್ಯಕ್ಷರು ಮಾತನಾಡುತ್ತಾ ಕೋರ್ ಬೆಂಗಳೂರಿನಲ್ಲಿ ಹಳೇ ವಾರ್ಡುಗಳಲ್ಲಿ ಒಂಟಿ ಮನೆಗಳ ಫಲಾನುಭವಿಗಳು ಸಿಗುವುದಿಲ್ಲ. ಮಲ್ಲೇಶ್ವರಂ ಈ ಪ್ರದೇಶಗಳಲ್ಲಿ 35 ಫಲಾನುಭವಿಗಳು ಇದ್ದರೆ 5 ಜನ ಮಾತ್ರ ಒಂಟಿ ಮನೆ ಫಲಾನುಭವಿಗಳು ಇರುತ್ತಾರೆ. ಡೆವಲಪ್ಡ್ ಏರಿಯಾಗಳಲ್ಲಿ ಫಲಾನುಭವಿಗಳು ಸಿಗುವುದಿಲ್ಲ ಅಂತಹ ಪ್ರಕರಣಗಳಲ್ಲಿ ಬೇರೆ ವಾರ್ಡಿನ ಫಲಾನುಭವಿಗಳಿಗೆ ನೀಡಲು ನಿರ್ಣಯ ಮಾಡಲು ತಿಳಿಸಲಾಯಿತು.

ಉಪ ನಿಯಂತ್ರಕರು ಹಣಕಾಸುರವರು ಮಾತನಾಡುತ್ತಾ, 2016-17ನೇ ಸಾಲಿನಲ್ಲಿ ಈ ರೀತಿಯ ಪ್ರಕರಣಗಳು ಇರಲಿಲ್ಲ. 2017-18ನೇ ಸಾಲಿನಲ್ಲಿಯೂ ಅದೇ ರೀತಿ ಅನುಸರಿಸಲಾಗಿದೆ. 2018-19 ಸಾಲಿನಲ್ಲಿ ಸದರಿ ಯೋಜನೆ ಇನ್ನು ಮುಗಿದಿಲ್ಲ ಏನಾದರು ಮಾಡಿ ಲಿಮಿಟೆಡ್ ಮಾಡಬೇಕು 70 ರಿಂದ 80 ಕೋಟಿ ರೂಪಾಯಿಗಳ ಜಾಬ್ ಕೋಡ್ ಮಾಡಬೇಕಾಗುತ್ತದೆ ಕೆಲವು ವಾರ್ಡಿಗೆ ಜಾಸ್ತಿ ಕೆಲವು ವಾರ್ಡಿಗೆ ಕಡಿಮೆ ಹಣ ಬೇಕಾಗುತ್ತದೆ.

ಮಾನ್ಯ ಅಧ್ಯಕ್ಷರು ಮಾತನಾಡುತ್ತಾ ಜಾಬ್ ಕೋಡ್ ಕೊಡುವಾಗ ಡಿಮ್ಯಾಂಡ್ ಏನಿದೆ ಸಿ.ಎ.ಓ. ಹತ್ತಿರ ಮಾಹಿತಿ ಇರುತ್ತದೆ ಆ ಮಾಹಿತಿ ಆಧಾರದ ಮೇಲೆ ಸಿ.ಎ.ಓ.ರವರಿಗೆ ಅಡ್ವಾನ್ಸಾಗಿ ಪೇಮೆಂಟ್ ಮಾಡಲು ತಿಳಿಸಬೇಕು. ವರ್ಕ್ ಆರ್ಡರ್ ಆಧಾರದ ಮೇಲೆ ಪೇಮೆಂಟ್ ಮಾಡಲು ತಿಳಿಸಲಾಯಿತು ಹಾಗೂ ತಮ್ಮ ತಮ್ಮ ಕಛೇರಿಗಳ ಕುಂದು ಕೊರತೆಗಳ ಬಗ್ಗೆ ಚರ್ಚಿಸಲು ತಿಳಿಸಿದರು.

ಉಪ ನಿಯಂತ್ರಕರು ಹಣಕಾಸು ರವರ ಕಛೇರಿಗಳಲ್ಲಿ ಸಿಬ್ಬಂದಿ ವರ್ಗದವರ ಕೊರೆಯಿಂದಾಗಿ ಕೆಲಸ ಕಾರ್ಯಗಳು ಕುಂಠಿತಗೊಳ್ಳುತ್ತಿದೆ ಎಂದು ತಿಳಿಸಿದಾಗ, ಈ ಬಗ್ಗೆ ಲಿಖಿತ ರೂಪದಲ್ಲಿ ಟಿಪ್ಪಣಿಯನ್ನು ಮಂಡಿಸಲು ಶ್ರೀ.ಎಂ.ಕೆ.ಗುಣಶೇಖರ್, ಸದಸ್ಯರು ತಿಳಿಸಿದರು.

ಮಾನ್ಯ ಅಧ್ಯಕ್ಷರು, ಲೆಕ್ಕಪತ್ರ ಸ್ಥಾಯಿ ಸಮಿತಿ ರವರು ಮಾತನಾಡುತ್ತಾ, ತಮ್ಮ ವಲಯಗಳಿಗೆ ತುರ್ತಾಗಿ ಪೂಜ್ಯ ಮಹಾಪೌರರು, ಉಪ ಮಹಾಪೌರರು ಅಥವಾ ಆಯುಕ್ತರವರು ಭೇಟಿ ಕೊಟ್ಟಂತಹ ಸಮಯದಲ್ಲಿ ಸದರಿ ಕೆಲಸಕ್ಕಾಗಿ ರಿವಾಲ್ವಿಂಗ್ ಫಂಡ್ ಎಂದು ಹಣವನ್ನು ಇಟ್ಟಿದ್ದಾರೆಯೇ ಎಂದು ಪ್ರಶ್ನಿಸಿದಾಗ, ಇದಕ್ಕೆ ಉಪ ನಿಯಂತ್ರಕರು ಹಣಕಾಸುರವರು ರೂ.25,000/- ಗಳನ್ನು ರಿವಾಲ್ವಿಂಗ್ ಫಂಡ್ ಅವರ ಕಛೇರಿಯಲ್ಲಿಯೇ ಡಿ.ಸಿ. ಬಿಲ್ ಮಾಡಿಕೊಳ್ಳುತ್ತಿದ್ದಾರೆ ಎಂದು ಉತ್ತರಿಸಿದರು.

ಉಪ ನಿಯಂತ್ರಕರು ಹಣಕಾಸು ಅಥವಾ ಸಹಾಯಕ ನಿಯಂತ್ರಕರು ಹಣಕಾಸು ರವರ ಕಛೇರಿಯು ಮುಖ್ಯ ಕಛೇರಿಯಾಗಿದ್ದು, ಸದರಿ ಕಛೇರಿಗಳ ತುರ್ತು ಕೆಲಸ ಕಾರ್ಯಗಳ ಖರ್ಚುಗಳಿಗೆ ಹಾಗೂ ಸುರಕ್ಷತೆ ಉದ್ದೇಶಕ್ಕಾಗಿ ರೂ.15,000/- ಗಳನ್ನು ಬಿಡುಗಡೆ ಮಾಡಲು ನಿರ್ಣಯಕ್ಕಾಗಿ ಟಿಪ್ಪಣಿಯನ್ನು ಮಂಡಿಸಲು ಅಧ್ಯಕ್ಷರು, ಲೆಕ್ಕಪತ್ರ ಸ್ಥಾಯಿ ಸಮಿತಿ ರವರು ತಿಳಿಸಿದರು.

ಅಂತಿಮವಾಗಿ ಅಧ್ಯಕ್ಷರು, ಲೆಕ್ಕಪತ್ರ ಸ್ಥಾಯಿ ಸಮಿತಿರವರು ಅಧಿಕಾರಿಗಳನ್ನು ಉದ್ದೇಶಿಸಿ, ಲೆಕ್ಕಪರಿಶೋಧನಾ ವರದಿಯಲ್ಲಿ ಆಕ್ಷೇಪಣೆ ಮತ್ತು ವಸೂಲಾತಿಗೆ ಸಂಬಂಧಿಸಿದಂತೆ, ಉತ್ತರಗಳನ್ನು ನೀಡಲು ತಿಳಿಸಿ, ಪಾಲಿಕೆಯ ಬೊಕ್ಕಸಕ್ಕೆ ಯಾವುದೇ ರೀತಿಯಲ್ಲಿ ನಷ್ಟವಾಗದಂತೆ ಕೆಲಸ ನಿರ್ವಹಿಸಲು ಸೂಚಿಸಿದರು. ತಪ್ಪಿದ್ದಲ್ಲಿ, ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಸೂಕ್ತ ಶಿಸ್ತು ಕ್ರಮ ಕೈಗೊಳ್ಳಲಾಗುವುದೆಂದು ಸಭೆಯಲ್ಲಿ ಪ್ರಸ್ತಾಪಿಸಿರುವ ಎಲ್ಲಾ ವಿಷಯಗಳ ಬಗ್ಗೆ ಕ್ರಮ ವಹಿಸಲು ಘಟಕ ಕಛೇರಿಯ ಅಧಿಕಾರಿಗಳಿಗೆ ತಿಳಿಸುತ್ತಾ, ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಅಧ್ಯಕ್ಷರು,
ಲೆಕ್ಕಪತ್ರ ಸ್ಥಾಯಿ ಸಮಿತಿ.

ಮುಂದುವರೆದಿದೆ...........

<u>ಪ್ರತಿಯನ್ನು:</u>

1. ಪೂಜ್ಯ ಮಹಾಪೌರರ ಆಪ್ತ ಕಾರ್ಯದರ್ಶಿಗಳಿಗೆ ಕಳುಹಿಸುತ್ತಾ, ಈ ವಿಷಯವನ್ನು ಪೂಜ್ಯ ಮಹಾಪೌರರ ಗಮನಕ್ಕೆ ತರಲು ಕೋರಿದೆ.
2. ಉಪ ಮಹಾಪೌರರ ಆಪ್ತ ಕಾರ್ಯದರ್ಶಿಗಳಿಗೆ ಕಳುಹಿಸುತ್ತಾ, ಈ ವಿಷಯವನ್ನು ಉಪ ಮಹಾಪೌರರ ಗಮನಕ್ಕೆ ತರಲು ಕೋರಿದೆ.
3. ಆಯುಕ್ತರವರ ಅಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ಈ ವಿಷಯವನ್ನು ಮಾನ್ಯ ಆಯುಕ್ತರವರ ಅವಗಾಹನೆಗೆ ತರಲು ಕೋರಿದೆ.
4. ಆಡಳಿತ ಪಕ್ಷ/ವಿರೋಧ ಪಕ್ಷ/ಜೆ.ಡಿ.ಎಸ್.ಪಕ್ಷದ ನಾಯಕರುಗಳಿಗೆ ಮಾಹಿತಿಗಾಗಿ ಕಳುಹಿಸಿದೆ.
5. ಲೆಕ್ಕಪತ್ರ ಸ್ಥಾಯಿ ಸಮಿತಿಯ ಸದಸ್ಯರುಗಳಿಗೆ ಕಳುಹಿಸಿದೆ.
6. ವಿಶೇಷ ಆಯುಕ್ತರು (ಹಣಕಾಸು) ರವರಿಗೆ ಮಾಹಿತಿಗೆ ಕಳುಹಿಸಿದೆ.
7. ಮುಖ್ಯ ಲೆಕ್ಕಾಧಿಕಾರಿಗಳಿಗೆ ಮಾಹಿತಿಗಾಗಿ ಕಳುಹಿಸಿದೆ ಕೌನ್ಸಿಲ್ ಕಾರ್ಯದರ್ಶಿಗಳ ಮಾಹಿತಿಗಾಗಿ ಕಳುಹಿಸಿದೆ.
8. ಕಛೇರಿ ಕಡತಕ್ಕೆ.